# ಪದ್ಯ ಭಾಗ

## 6. ತತ್ತ್ವಪದಗಳು – ಕಡಕೋಳ ಮಡಿವಾಳಪ್ಪ – ಶಿಶುನಾಳ ಶರೀಫ

### ಕೃತಿಕಾರರ ಪರಿಚಯ

**ಕಡಕೋಳ ಮಡಿವಾಳಪ್ಪ** ಅವರು (ಕ್ರಿ. ಶ. 1765) ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ **ಬಿದನೂರ** ಗ್ರಾಮದಲ್ಲಿ ಜನಿಸಿದರು. ಇವರ ತಾಯಿ ಗಂಗಮ್ಮ, ತಂದೆ ವಿರೂಪಾಕ್ಷಯ್ಯ. ಇವರು ಕಲಬುರ್ಗಿಯ ಶ್ರೀಶರಣ ಬಸವೇಶ್ವರರ ನಿರ್ದೇಶನದಂತೆ ಕಲಕೇರಿ ಮರುಳಾರಾಧ್ಯರಿಂದ ಲಿಂಗದೀಕ್ಷೆಯನ್ನು ಪಡೆಯುತ್ತಾರೆ. ಆಧ್ಯಾತ್ಮಕ್ಷೇತ್ರದಲ್ಲಿ ತನ್ನದೇ ಆಗಿರುವ ಪ್ರತಿಭೆಯನ್ನು ಮೆರೆದ ವಿಶಿಷ್ಟ ಕವಿ ಎನಿಸಿಕೊಂಡಿದ್ದಾರೆ. ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕು ಯಡ್ರಾಮಿ ಬಳಿಯ ಕಡಕೋಳ ಗ್ರಾಮವು ಇವರ ಕಾರ್ಯಕ್ಷೇತ್ರ. ಇಲ್ಲಿ ಕಡಕೋಳ ಮಡಿವಾಳಪ್ಪ ಅವರ ಮಠವಿದೆ. **'ಮಹಾಂತೇಶ'** ಎಂಬ ಅಂಕಿತವನ್ನು ಇಟ್ಟುಕೊಂಡು ನೂರಾರು ತತ್ತ್ವಪದಗಳನ್ನು ರಚಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

'ಗುರುಕರುಣೆ' ತತ್ತ್ವಪದವನ್ನು 'ಆಯ್ದ ತತ್ತ್ವಪದಗಳು' (ಪುಟ ಸಂಖ್ಯೆ 4) ಸಂಕಲನದಿಂದ ಆಯ್ದು ನಿಗದಿಪಡಿಸಿದೆ.



### ಆಶಯ ಭಾವ

ಕಡಕೋಳ ಮಡಿವಾಳಪ್ಪ ಅವರ ತತ್ತ್ವಪದವು ಮಾನವನು ತನ್ನ ಜೀವನದಲ್ಲಿ ಅನುಸರಿಸಬೇಕಾದ ನಡೆನುಡಿಗಳನ್ನು ಬಹುಸುಂದರವಾಗಿ ಚಿತ್ರಿಸುತ್ತದೆ. ನಮ್ಮ ಎಲ್ಲ ಕಾರ್ಯಗಳಿಗೆ ಗುರುಕರುಣೆ ಅತ್ಯಗತ್ಯ. ಅವರು ಸಾಧು ಸತ್ಪುರುಷರ ಸೇವೆಯನ್ನು ಮಾಡುವುದು. ಹೀನ ಮನುಷ್ಯರ ಸ್ನೇಹವನ್ನು ಮಾಡದಿರುವುದು. ಸಮಯವನ್ನು ವ್ಯರ್ಥಮಾಡದಿರುವುದು ಉತ್ತಮ ಗುಣಗಳು ಎಂದು ಅಭಿಪ್ರಾಯಪಡುತ್ತಾರೆ.

ಅಶನ – ಅನ್ನ, ಆಹಾರ.

### ಕೃತಿಕಾರರ ಪರಿಚಯ



ಸಂತ ಶಿಶುನಾಳ ಶರೀಫ ತತ್ತ್ವಪದ ರಚನಾಕಾರರಾದ ಇವರು (ಕ್ರಿಸ್ತ ಶಕ 1819) ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ, ಶಿಶುನಾಳದವರು. ಬಾಲ್ಯದ ಹೆಸರು ಮಹಮ್ಮದ್ ಶರೀಫ. ಗುರು ಕಳಸದ ಗೋವಿಂದ ಭಟ್ಟರು. ಕರ್ನಾಟಕದ ಕಬೀರರೆಂದೇ ಶರೀಫರು ಪ್ರಸಿದ್ಧರು. ಶಿಶುನಾಳಾಧೀಶ, ಶಿಶುನಾಳೇಶ ಅಂಕಿತ. ಇವರು ನೂರಾರು ತತ್ವಪದಗಳನ್ನು ರಚಿಸಿದ್ದಾರೆ.

'ಬಿದಿರು' ತತ್ತ್ವಪದವನ್ನು ವಿದ್ವಾನ್ ಸದ್ಯೋಜಾತಮೂರ್ತಿ ಸಂಪಾದಿಸಿರುವ 'ಶಿಶುನಾಳರ ಗೀತೆಗಳು' ಸಂಕಲನದಿಂದ (ಪುಟ 79) ಆಯ್ದು ನಿಗದಿಪಡಿಸಿದೆ.

## ಆಶಯ ಭಾವ

ಪ್ರಕೃತಿಯಲ್ಲಿ ಬೇಡವಾದ ವಸ್ತು ಯಾವುದೂ ಇಲ್ಲ. ಕೆಲವು ಹೆಚ್ಚು ಮತ್ತೆ ಕೆಲವು ಕಡಿಮೆ ಉಪಯೋಗಿ ವಸ್ತುಗಳಾಗಿವೆ. ಹುಟ್ಟಿನಿಂದ ಸಾವಿನ ತನಕ ದಿನನಿತ್ಯ ಬಳಸುವ ಅತ್ಯಮೂಲ್ಯ ವಸ್ತು ನೀರು. ಇದರಂತೆ ಬಿದಿರೂ ಬಹು ಉಪಯೋಗಿ. ಸಮಾಜದಲ್ಲಿ ಎಲ್ಲರಿಗೂ ಎಲ್ಲಾ ಸಂದರ್ಭಗಳಲ್ಲೂ ಬೇಕಾದ ಈ ಅಮೂಲ್ಯ ಅತ್ಯಗತ್ಯ ಬಿದಿರನ್ನು ಸಂತ ತನ್ನ ದೃಷ್ಟಿಯಲ್ಲಿ ನೋಡಿದ ಪರಿ ಈ ತತ್ತ್ವ ಪದದಲ್ಲಿ ಸರಳ ಸುಂದರವಾಗಿ ಚಿತ್ರಿತವಾಗಿದೆ

## ಪದಗಳ ಅರ್ಥ

ಏಕದಂಡಿ – ತಂತೀ ವಾದ್ಯ.

ದಂಡಿಗೆ – ಪಲ್ಲಕ್ಕಿ ಹೊರುವ ಕೋಲು;

ಚಕ್ಕಡಿ – ಎತ್ತಿನಗಾಡಿ.

ಬಹುಪಾಡ – ಬಹಳ ಕಷ್ಟ

ದಿವಿನಾಗು – ಮೈತುಂಬಿಕೊಳ್ಳು;

ಮರ (ಮೊರ) – ಕೇರುವ ಸಾಧನ, ಗೆರಸೆ.

## ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ಯಾರ ಸ್ನೇಹವು ಸಾಯುವತನಕ ಬೇಡ ಎಂದಿದ್ದಾರೆ?

   **ಉತ್ತರ** : ಗುರುಕರುಣೆ ಇಲ್ಲದವನ ಸ್ನೇಹ ಸಾಯುವತನಕ ಬೇಡ ಎಂದಿದ್ದಾರೆ.

2. ಯಾರ ಸ್ನೇಹವನ್ನು ಮಾಡಿ ಕೆಡಬಾರದು?

   **ಉತ್ತರ** : ಹೀನ ಮನುಷ್ಯನ ಸ್ನೇಹ ಮಾಡಿ ಕೆಡಬಾರದು.

3. ತತ್ತ್ವಪದಕಾರರು ಯಾರ ಸೇವೆ ಮಾಡಬೇಕು ಎಂದಿದ್ದಾರೆ?

   **ಉತ್ತರ** : ತತ್ತ್ವಪದಕಾರರು ಸಾಧು-ಸತ್ಪುರುಷರ ಸೇವೆ ಮಾಡಬೇಕು ಎಂದಿದ್ದಾರೆ.

4. ಬಿದಿರು ಹೇಗೆ ಬೆಳೆಯಿತು?

   **ಉತ್ತರ** : ಬಿದಿರು ಹುಟ್ಟುತ್ತಾ ಹುಲ್ಲಿನಂತಿದ್ದ ಬೆಳೆಬೆಳೆಯುತ್ತ ದಿವಿಯಾಗುತ್ತದೆ.

5. ಬಿದಿರಿನ ಚಪ್ಪರವು ಏನನ್ನು ಕೊಡುತ್ತದೆ?

   **ಉತ್ತರ** : ಬಿದಿರಿನ ಚಪ್ಪರವು ನೆರಳನ್ನು ಕೊಡುತ್ತದೆ.

6. ಬಿದಿರು ಶಿಶುನಾಳಾಧೀಶನಿಗೆ ಏನಾಗುತ್ತದೆ?

   **ಉತ್ತರ** : ಬಿದಿರು ಶೀಶುನಾಳಧೀಶನಿಗೆ ಓಲಗವಾಗುತ್ತದೆ.

## ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಬಿದಿರು ಮಕ್ಕಳಿಗೆ, ರೈತರಿಗೆ, ಮಹಾತ್ಮರಿಗೆ ಯಾವ ರೀತಿಯಲ್ಲಿ ಉಪಯೋಗವಾಗುತ್ತದೆ?

   **ಉತ್ತರ** : ಬಿದಿರು ಮಕ್ಕಳಿಗೆ ತೂಗುವ ತೊಟ್ಟಿಲಾಗಿ ಉಪಯೋಗವಾಗುತ್ತದೆ. ಮಕ್ಕಳು ನಿದ್ದೆ ಮಾಡಲು ಬಹು ಉಪಯೋಗಿ, ರೈತರಿಗೆ ಹೊಲದಲ್ಲಿ ಬೀಜ ಬಿತ್ತಲು ಸಹಕಾರಿಯಾದ ಕೂರಿಗೆಯಾಗಿ ಉಪಯೋಗವಾಗಿದೆ. ಮಹಾತ್ಮರ ಕೈಯಲ್ಲಿನ ಬೆತ್ತವಾಗಿ ಬಿದಿರು ಉಪಯೋಗವಾಗಿದೆ.

2. ಧಾನ್ಯಗಳನ್ನು ಕುಟ್ಟಲು, ಬೀಸಲು, ಕೇರಲು ಬಿದಿರು ಹೇಗೆ ಸಹಾಯಕವಾಗಿರುತ್ತದೆ?

   **ಉತ್ತರ** : ಬಿದಿರು ಧಾನ್ಯಗಳನ್ನು ಕುಟ್ಟಲು ಒನಕೆಯಾಗಿ ಬೀಸುವ ಕಲ್ಲಿನ ಗೂಟವಾಗಿ ಅಕ್ಕಿ ರಾಗಿ, ಕೇರುವ ಮರವಾಗಿ ಸಹಾಯಕವಾಗಿರುತ್ತದೆ.

3. ತತ್ತ್ವಪದಕಾರರು ಸ್ನೇಹ ಮಾಡುವ ಬಗೆಗೆ ಏನೆಂದು ತಿಳಿಸಿದ್ದಾರೆ?

   **ಉತ್ತರ** : ಗುರುಕರುಣವಿಲ್ಲದವನ ಸ್ನೇಹ ಸಾವುತನಕ ಮಾಡಬಾರದು. ಮಾತಿನೊಳಗ ಮಾತಿಲ್ಲದವನ ಸ್ನೇಹ ಜಾತಿಜನ್ಮಕಬೇಡ. ಹೀನ ಮನುಷ್ಯನ ಸ್ನೇಹ ಮಾಡಿ ನೀನು ಕೆಡಲಿಬೇಡ. ಮಾತಿನೊಳಗೆ ಮಾತಿಲ್ಲದವನ ಸ್ನೇಹ ಜನ್ಮ ಇರುವವರೆಗೆ ಬೇಡ, ಹೀನ ಮನುಷ್ಯನ ಸ್ನೇಹವನ್ನು ಮಾಡಿ ಕೆಡಬಾರದೆಂದು ತತ್ತ್ವಪದಕಾರರು ಹೇಳಿದ್ದಾರೆ.

4. ‘ಗುರುಕರುಣೆ’ ಪದ್ಯದ ಮೂರು ಮತ್ತು ನಾಲ್ಕನೆಯ ಚರಣದಲ್ಲಿ ಏನನ್ನು ಮಾಡಬಾರದೆಂದು ತತ್ತ್ವಸಾರಿದ್ದಾರೆ?

**ಉತ್ತರ** : ಅಕ್ಕ – ತಂಗಿಯರು ಎಂದು ಬಾಯಲಿ ಕರೆದು ಅವರನ್ನು ಕೆಟ್ಟದಾಗಿ ನೋಡಬಾರದು, ಮನಸ್ಸಿನಲ್ಲಿ ಕೆಟ್ಟ ಆಲೋಚನೆ ಮಾಡಬಾರದು. ಬರೀ ಊಟ ಮಾಡುತ್ತಾ ಸಮಯವನ್ನು ವ್ಯರ್ಥ ಹಾಳುಮಾಡಬಾರದು. ಮೇಲು – ಕೀಳು ಎಂಬ ಭಾವನೆಯನ್ನು ಬಿಟ್ಟು ಬದುಕಬೇಕು. ಎಳೆಗರು ಎತ್ತಾಗದೆ ಎಂಬಂತೆ ಹಿಂದೆ ಕಿರಿದಾಗಿರುವುದು ಇಂದು ಹಿರಿದಾಗುತ್ತದೆ. ಯಾವುದನ್ನೂ ಉಪೇಕ್ಷೆ ಮಾಡಬಾರದು. ಒಂದನ್ನು ಮತ್ತೊಂದಕ್ಕೆ ಹೋಲಿಸಿ ಸರಿ ಮಾಡಲು ಬೇಡ. ಅವುಗಳಿಗೆ ಅವುಗಳದ್ದೆ ಸ್ಥಾನವಿದೆ. ಯಾವಾಗಲೂ ಗುರು ಮಹಾಂತೇಶ ಧ್ಯಾನವನ್ನು ಮಾಡುತ್ತಾ ಜೀವನ ನಡೆಸಬೇಕು.

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ‘ಗುರುಕರುಣೆ’ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಉತ್ತರ** : ಕಡಕೋಳ ಮಡಿವಾಳಪ್ಪರವರ ತತ್ತ್ವಪದದಲ್ಲಿ ಸ್ನೇಹ, ಸಂಬಂಧ, ಸೇವೆಗಳ ಬಗ್ಗೆ ವಿವರಿಸಿದ್ದಾರೆ. ಮಾನವನು ತನ್ನ ಜೀವನದಲ್ಲಿ ಅನುಸರಿಸಬೇಕಾದ ನಡೆನುಡಿಗಳನ್ನು ಬಹುಸುಂದರವಾಗಿ ಚಿತ್ರಿಸುತ್ತದೆ. ನಮ್ಮ ಎಲ್ಲ ಕಾರ್ಯಗಳಿಗೆ ಗುರುಕರುಣೆ ಅತ್ಯಗತ್ಯ.ಯಾವ ವ್ಯಕ್ತಿಯು ಗುರುಗಳ ಮೇಲೆ ಗೌರವ, ಅಭಿಮಾನ ಇಲ್ಲವೋ, ಗುರುಗಳ ಅನುಗ್ರಹ, ಕೃಪೆಯನ್ನು ಗಳಿಸಿಲ್ಲವೋ, ಗುರುಕರುಣೆ ಇಲ್ಲದವನ ಸ್ನೇಹ ಸಾಯುತನಕ ಮಾಡಬಾರದು ಎಂದಿದ್ದಾರೆ ತತ್ತ್ವಪದಕಾರರು. ಸಾಧು ಸತ್ಪುರುಷರ ಸೇವೆಯನ್ನು ಮಾಡಿ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು. ಕೆಟ್ಟ ಮನುಷ್ಯರ ಸ್ನೇಹವನ್ನು ಮಾಡಿ ಕೆಡಬಾರದು. ಹೀನ ಮನುಷ್ಯರ ಸ್ನೇಹವನ್ನು ಮಾಡದಿರುವುದು ಒಳ್ಳೆಯದು ಎಂದಿದ್ದಾರೆ. ಅಕ್ಕ ತಂಗಿಯರೆಂದು ಬಾಯಿಯಲ್ಲಿ ಕರೆದು ಅವರನ್ನು ಕೆಟ್ಟ ದೃಷ್ಟಿಯಿಂದ ನೋಡಬಾರದು. ನಿತ್ಯ ಕಾಲದಲ್ಲಿ ಆಹಾರವನ್ನು ಸೇವಿಸುತ್ತಾ ಸಮಯವನ್ನು ವ್ಯರ್ಥಮಾಡಬಾರದು. ಮೇಲು ಕೀಳೂ ಎಂಬ ಭಾವನೆಯಿಲ್ಲದೆ, ಎಳೆಗರು ಎತ್ತಾಗದೆ ಎಂಬಂತೆ ಹಿಂದೆ ಕಿರಿದಾಗಿರುವುದು ಇಂದು ಹಿರಿದಾಗುತ್ತದೆ. ಯಾವುದನ್ನೂ ಉಪೇಕ್ಷೆ ಮಾಡಬಾರದು. ಒಂದನ್ನು ಮತ್ತೊಂದಕ್ಕೆ ಹೋಲಿಸಿ ಸರಿ ಮಾಡಲು ಬೇಡ. ಅವುಗಳಿಗೆ ಅವುಗಳದ್ದೆ ಸ್ಥಾನವಿದೆ. ಗುರು ಮಹಾಂತೇಶನ ಸೇವೆಯನ್ನು ಮಾಡುತ್ತಾ ಇರುವುದೇ ಉತ್ತಮ ಗುಣಗಳು ಎಂದು ತತ್ತ್ವಪದಕಾರರು ಅಭಿಪ್ರಾಯ ಪಡುತ್ತಾರೆ.

2. ‘ಬಿದಿರು’ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಉತ್ತರ** : ಸಂತ ಶಿಶುನಾಳ ಶರೀಫರ ತತ್ತ್ವಪದದಲ್ಲಿ ಪ್ರಕೃತಿಯಲ್ಲಿ ಬೇಡವಾದ ವಸ್ತು ಯಾವುದೂ ಇಲ್ಲ. ಅದರಲ್ಲೂ ಕೆಲವು ವಸ್ತುಗಳು ಬಹು ಉಪಯೋಗಿಗಳು. ಹುಟ್ಟಿನಿಂದ ಸಾವಿನ ತನಕ ದಿನನಿತ್ಯ ಬಳಸುವ ಅತ್ಯಮೂಲ್ಯ ವಸ್ತು ನೀರು ಇದರಂತೆ ಬಿದಿರು ಬಹು ಉಪಯೋಗಿ. ಸಮಾಜದಲ್ಲಿ ಎಲ್ಲರಿಗೂ ಎಲ್ಲಾ ಸಂದರ್ಭಗಳಲ್ಲೂ ಬೇಕಾದ ಈ ಅಮೂಲ್ಯ ಅತ್ಯಗತ್ಯ ಬಿದಿರನ್ನು ಸಂತ ತನ್ನ ದೃಷ್ಟಿಯಲ್ಲಿ ನೋಡಿದ ಪರಿ ಈ ತತ್ತ್ವಪದದಲ್ಲಿ ಸರಳ ಸುಂದರವಾಗಿ ಚಿತ್ರಿತವಾಗಿದೆ.

ಹುಟ್ಟುತ ಹುಲ್ಲು ನಾನಾದೆ ಬೆಳೆಬೆಳೆಯುತ್ತ ದಿವಿನಾದೆ ಮಕ್ಕಳನು ತೂಗುವತೊಟ್ಟಿಲಾಗುತ್ತದೆ. ಪಲ್ಲಕ್ಕಿಯ ದಂಡಿಗೆಯಾಗಿ, ಪತ್ರೆಗೆ ಬುಟ್ಟಿ ತಾನಾಗಿ, ಮಹಾತ್ಮರ ಕೈಗೆ ಬೆತ್ತವಾಗಿ, ಒನಕೆಯಾಗಿ, ಅಂಬಿಗಗೆ ಕೋಲಾಗಿ ಬಹು ಉಪಯೋಗಿ, ರೈತನಿಗೆ ಬಿತ್ತುವ ಕೂರಿಗ್ಯಾಗಿ ಉಪಯೋಗವಾಗುತ್ತದೆ. ಬೀಸುಕಲ್ಲಿನ ಗೂಟವಾಗಿ ಮೊರವಾಗಿ ಬೆತ್ತವಾಗಿ ಊರುಗೋಲಾಗಿ, ಕೋಲಾಗಿ ಬಂಡಿಯಾಗಿ ನಂದಿ ಕೋಲಾಗಿ, ಚಪ್ಪರವಾಗಿ ಕೊಳಲು, ಮಗುವಿನಿಂದ ಮುದುಕರವರೆಗೆ ಎಲ್ಲರ ಅಗತ್ಯಗಳನ್ನು ಪೂರೈಸುವಲ್ಲಿ ಬಿದಿರು ಬಹು ಉಪಯೋಗಿ. ಆಡುವ ಕೋಲಾಗಿ, ಹೂಡಲು ಚಕ್ಕಡಿಯಾಗಿ, ಸಿದ್ದರಾಮೇಶಗೆ ನಂದಿ ಕೋಲಾಗಿ, ನೆರಳಿಗೆ ಚಪ್ಪರವಾಗಿ, ಏಕದಂಡಿಗೆ ಕೊಳವೆಯಾಗಿ, ಶಿಶುನಾಳಾಧೀಶಗೆ ಓಲಗವಾಗಿ ಬಿದಿರು ಸಾರ್ಥಕವಾಗುತ್ತದೆ.

## ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ಹೀನ ಮನುಷ್ಯನ ಸ್ನೇಹ ಮಾಡಿ ನೀನು ಕೆಡಲಿಬೇಡ"

**ಆಯ್ಕೆ :** **ಕಡಕೋಳ ಮಡಿವಾಳಪ್ಪನವರ** ತತ್ತ್ವಪದದ ಈ ವಾಕ್ಯವನ್ನು **'ಆಯ್ದ ತತ್ತ್ವಪದಗಳು'** ಸಂಕಲನದಿಂದ ಆಯ್ದು **'ತತ್ತ್ವಪದಗಳು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಗುರುಕರುಣೆಯಿಲ್ಲದವನ ಸ್ನೇಹವನ್ನು ಸಾಯುತನಕ ಮಾಡಬಾರದು ಮಾತಿನೊಳಗೆ ಮಾತಿಲ್ಲದವನ ಸ್ನೇಹ ಮಾಡಬಾರದು. ಹೀನ ಮನುಷ್ಯನ ಸ್ನೇಹವನ್ನು ಮಾಡಿ ಕೆಡಬಾರದೆಂದು ಎಂದು ಹೇಳುವ ಸಂದರ್ಭದಲ್ಲಿ ತತ್ತ್ವಪದಕಾರರು ಈ ಮಾತನ್ನು ಹೇಳಿದ್ದಾರೆ.

**ಸ್ವಾರಸ್ಯ :** ಮಾನವನು ಹೇಗೆ ಬದುಕಬೇಕೆಂದು, ಯಾರ ಸ್ನೇಹವನ್ನು ಮಾಡಬೇಕು, ಯಾರ ಸ್ನೇಹವನ್ನು ಮಾಡಬಾರದು ಎಂಬ ಸಂದೇಶವನ್ನು ನೀಡಿರುವುದು ಸ್ವಾರಸ್ಯಕರವಾಗಿದೆ.

2. "ನಿತ್ಯಕಾಲದಲ್ಲಿ ಅಶನವ ಉಂಡು ಹೊತ್ತು ಗಳಿಯಲಿಬೇಡ"

**ಆಯ್ಕೆ :** **ಕಡಕೋಳ ಮಡಿವಾಳಪ್ಪನವರ** ತತ್ತ್ವಪದದ ಈ ವಾಕ್ಯವನ್ನು **'ಆಯ್ದ ತತ್ತ್ವಪದಗಳು'** ಸಂಕಲನದಿಂದ ಆಯ್ದು **'ತತ್ತ್ವಪದಗಳು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಮನುಷ್ಯನು ಕೆಲಸ ಮಾಡುವ ಸಮಯದಲ್ಲಿ ಊಟವನ್ನು ಮಾಡುತ್ತಾ ಸಮಯವನ್ನು ವ್ಯರ್ಥ ಮಾಡಿಕೊಳ್ಳಬಾರದು. ಮೇಲು – ಕೀಳು ಎಂಬ ಭಾವನೆಯನ್ನು ಬಿಟ್ಟು ಬದುಕಬೇಕು. ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ತತ್ತ್ವಪದಕಾರರು ಹೇಳಿದ್ದಾರೆ.

**ಸ್ವಾರಸ್ಯ :** ಮನುಷ್ಯನ ಜೀವನವು ಅಮೂಲ್ಯವಾದದು ಅದನ್ನು ಸುಮ್ಮನೆ ಊಟ ಮಾಡಿಕೊಂಡು ವ್ಯರ್ಥ ಮಾಡಬಾರದು. ಉಪಯುಕ್ತವಾದ ಕೆಲಸದಲ್ಲಿ ತೊಡಗಿ ಸಾರ್ಥಕತೆ ಮಾಡಿಕೊಳ್ಳಬೇಕು ಎಂಬುದು ಸ್ವಾರಸ್ಯಕರವಾಗಿ ಮೂಡಿ ಬಂದಿದೆ.

3. "ಮಹಾತ್ಮರ ಕೈಗೆ ಬೆತ್ತ ನಾನಾದೆ"

**ಆಯ್ಕೆ :** ಈ ವಾಕ್ಯವನ್ನು ಸಂತ ಶಿಶುನಾಳ ಶರೀಫರವರು ಬರದಿರುವ 'ಬಿದಿರು' ತತ್ತ್ವಪದವನ್ನು **ವಿದ್ವಾನ್ ಸದ್ಯೋಜಾತಮೂರ್ತಿ** ಸಂಪಾದಿಸಿರುವ **'ಶಿಶುನಾಳರ ಗೀತೆಗಳು'** ಸಂಕಲನದಿಂದ ಆಯ್ದು **'ತತ್ತ್ವಪದಗಳು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಬಿದಿರು ಮಕ್ಕಳಿಗೆ ತೂಗುವ ತೊಟ್ಟಿಲಾಗಿದೆ. ರೈತರಿಗೆ ಹೊಲದಲ್ಲಿ ಬೀಜ ಬಿತ್ತಲು ಉಪಯೋಗವಾಗುತ್ತದೆ. ಮಹಾತ್ಮರ ಕೈಗೆ ಬೆತ್ತವಾಗಿ ಬಿದಿರು ಉಪಯೋಗುತ್ತದೆ. ಬಿದಿರಿನ ಉಪಯೋಗಗಳನ್ನು ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಬಿದಿರಿನ ಉಪಯೋಗಗಳು ಸ್ವಾರಸ್ಯಕರವಾಗಿ ಮೂಡಿ ಬಂದಿವೆ.

4. "ಬೆಳೆ ಬೆಳೆಯುತ್ತ ದಿವಿನಾದೆ"

**ಆಯ್ಕೆ :** ಈ ವಾಕ್ಯವನ್ನು ಸಂತ ಶಿಶುನಾಳ ಶರೀಫರವರು ಬರದಿರುವ 'ಬಿದಿರು' ತತ್ತ್ವಪದವನ್ನು **ವಿದ್ವಾನ್ ಸದ್ಯೋಜಾತಮೂರ್ತಿ** ಸಂಪಾದಿಸಿರುವ **'ಶಿಶುನಾಳರ ಗೀತೆಗಳು'** ಸಂಕಲನದಿಂದ ಆಯ್ದು **'ತತ್ತ್ವಪದಗಳು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಬಿದಿರು ಹುಟ್ಟುತ್ತಾ ಹುಲ್ಲಾಗಿ ಬೆಳೆಬೆಳೆಯುತ್ತಾ ದಿವಿಯಾಗಿ ಬೆಳೆದು ವಿವಿಧ ಉಪಯೋಗಿ ವಸ್ತುಗಳನ್ನು ಮಾಡಲು ಅನುಕೂಲಕರವಾಗುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಬಿದಿರು ಯಾವ ರೀತಿ ಹುಟ್ಟಿ ಬೆಳೆಯುತ್ತದೆ ಎಂಬುದನ್ನು ತತ್ತ್ವಪದಕಾರರು ಸ್ವಾರಸ್ಯಕರವಾಗಿ ವರ್ಣಿಸಿದ್ದಾರೆ.

## ಉ) ಕೊಟ್ಟಿರುವ ಪದಗಳಲ್ಲಿ ಸೂಕ್ತಪದವನ್ನು ಆರಿಸಿ ಬರೆಯಿರಿ.

1. 'ಅಶನ' ಪದದ ಅರ್ಥ ____________
   (ಅನ್ನ ಆಸೆ ಬಟ್ಟೆ ನೀರು)
2. 'ಬೆತ್ತ' ಪದದ ತತ್ಸಮರೂಪ ____________
   (ವೆತ್ತ ವೇತ್ರ ಬೆತ್ರ ಪೆತ್ರ)
3. 'ಕರುಣೆ' ಪದದ ವಿರುದ್ಧಾರ್ಥಕ ಪದ ____________
   (ಅನುಕರಣೆ ನಿಕರುಣೆ ನಿಷ್ಕರುಣೆ ಅಪಕರುಣೆ)
4. 'ಅಂಬಿಗ' ಎಂದರೆ ________________
   (ರೈತ ಗಾಡಿ ಹೊಡೆಯುವವ ಗುರು ದೋಣಿ ನಡೆಸುವವ)

**1. ಅನ್ನ**
**2. ವೆತ್ತ**
**3. ನಿಷ್ಕರುಣೆ**
**4. ದೋಣಿ ನಡೆಸುವವ**

## ಊ) ಮೊದಲೆರಡು ಪದಗಳಿಗೆ ಸಂಬಂಧ ಇರುವಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

1. ಹಿಂದು : ಮುಂದು :: ಹಿರಿದು : _____________
2. ಮಾತಿಲ್ಲದವನ : ಲೋಪ ಸಂಧಿ :: ಕರುಣವಿಲ್ಲದವನ : ____________
3. ಮನುಷ್ಯನ : ಷಷ್ಠೀ ವಿಭಕ್ತಿ :: ಕಾಲದಲ್ಲಿ : ________________
4. ಪತ್ರ : ಎಲೆ :: ಚಕ್ಕಡಿ : ________________

1. ಕಿರಿದು
2. ವಕಾರಾಗಮಸಂಧಿ
3. ಸಪ್ತಮಿ ವಿಭಕ್ತಿ
4. ಎತ್ತಿನಗಾಡಿ

## ಅ. ಕೊಟ್ಟಿರುವ ಪದ್ಯಗಳನ್ನು ಕಂಠಪಾಠ ಮಾಡಿರಿ.

ಮಾತಿನೊಳಗ ಮಾತಿಲ್ಲದವನ ಸ್ನೇಹ
ಜಾತಿಜನ್ಮಕಬೇಡ ।
ಹೀನ ಮನುಷ್ಯನ ಸ್ನೇಹ ಮಾಡಿ
ನೀನು ಕೆಡಲಿಬೇಡ

ಬೀಸುವ ಗೂಟವಾದೆ
ಕೇರುವ ಮರವಾದೆ
ಮುದುಕರಿಗೆ ಊರುವ ಬೆತ್ತವಾದೆ

ಆಡುವ ಕೋಲಾದೆ
ಹೂಡಲು ಚಕ್ಕಡಿಯಾದೆ
ಸಿದ್ದರಾಮೇಶಗೆ ನಂದಿ ಕೋಲಾದೆ.